ಉಚ್ಚವರ್ಣದವನೆಂಬ ಅಭಿಮಾನ ಹರಿಯಿತು । ಕಣ್ಣಿಗೆ ಅಂಜನ ಹಾಕಿದಂತಾಯಿತು ।
ನಿಜಗುರುನಿರಂಜನನ ಭೆಟ್ಟಿಯಾಯಿತು । ನಿಧಾನ ಸಂಪನ್ನರಾದರವರು ॥ 137

ವಿಕಲ್ಪ ವೃತ್ತಿ ಕಳೆಯಿತು । ಬಾಬಾರಲ್ಲಿ ಪ್ರೀತಿ ಬೆಳೆಯಿತು ।
ಅರ್ಧೋನ್ಮೀಲಿತ ದೃಷ್ಟಿಯಾಯಿತು । ಸಾಯಿ ಚರಣಗಳಲ್ಲಿ ಸ್ಥಿರವಾಗಿ ಉಳಿಯಿತು ॥ 138

ಅನಂತ ಜನ್ಮದ ಸುಕೃತ ಫಲಿಸಿತು । ಸಾಯಿ ಚರಣದ ದರ್ಶನವಾಯಿತು ।
ಚರಣ ತೀರ್ಥದಲಿ ಸ್ನಾನವಾಯಿತು । ದೈವ ತೆರೆದಂತಾಯಿತು ॥ 139

ಜನರಿಗೆಲ್ಲ ಆಶ್ಚರ್ಯವಾಯಿತು । ಒಮ್ಮೆಲೇ ಇದು ಏನು ನಡೆಯಿತು ।
ದೂರದಿಂದ ಹೂವು ಎಸೆಯುವದು ಹೋಯಿತು । ಚರಣದಲಿ ಮಸ್ತಕ ಇಡುತಿರುವರಲ್ಲಾ ॥ 140

ಉಳಿದವರು ಬಾಬಾರ ಆರತಿ ಅನ್ನುತಿದ್ದರು । ಮುಳೆ ಘೋಲಪ ನಾಮ ಗರ್ಜಿಸುತಿದ್ದರು ।
ಉಚ್ಚಸ್ವರದಲ್ಲಿ ಅವರದೇ ಆರತಿ ಹಾಡಿದರು । ಪ್ರೇಮರಂಗದಲಿ ಗುಂಗಾಗಿ ಹೋದರು ॥141

ಮಡಿಯ ಭ್ರಮೆ ಕಳೆಯಿತು । ಸ್ಪರ್ಶಾಸ್ಪರ್ಶದ ಸ್ಫೂರ್ತಿಯೂ ಇಳಿಯಿತು ।
ಉದ್ದಕ್ಕೆ ಬಿದ್ದು ಸಾಷ್ಟಾಂಗವೆರಗಿ ಆಯಿತು । ಆನಂದದಲಿ ಕಣ್ಣು ಮುಚ್ಚಿದ್ದರು ॥ 142

ಎದ್ದು ನಿಂತು ಕಣ್ಣು ತೆರೆದು ನೋಡಲು । ಅದೃಶ್ಯರಾಗಿದ್ದರು ಘೋಲಪ ಸ್ವಾಮಿಗಳು ।
ಸಾಯಿ ಸಮರ್ಥರಿದ್ದರು ಆ ಸ್ಥಳದಲಿ । ದಕ್ಷಿಣೆ ಬೇಡುತಿದ್ದುದು ಕಂಡಿತು ॥ 143

ನೋಡಿ ಬಾಬಾರ ಆನಂದ ಮೂರ್ತಿ । ಮತ್ತು ಅವರ ಅತರ್ಕ್ಯಶಕ್ತಿ ।
ತಟಸ್ಥವಾಯಿತು ಚಿತ್ತವೃತ್ತಿ । ತಮ್ಮನ್ನು ತಾವೇ ಮರೆತರು ಮುಳೆ ॥ 144

ಇಂಥ ಈ ಮಹಾರಾಜರ ಕೌತುಕತೆ । ಹಿಂಗಿದವು ಅವರ ಹಸಿವು ನೀರಡಿಕೆ ।
ನಿಜಗುರುವಿನ ದರ್ಶನ ಲಭಿಸಿದುದಕೆ । ಪರಮ ಹರ್ಷಿತರಾದರು ಮುಳೆ ॥ 145

ಆಯಿತು ಮನಸಿಗೆ ಸಮಾಧಾನ । ಬಾಬಾರಿಗೆ ಮಾಡಿದರು ಸಾಷ್ಟಾಂಗ ನಮನ ।
ಆನಂದಾಶ್ರುಗಳಿಂದ ತುಂಬಿ ನಯನ । ಚರಣದಲಿ ಶಿರವನು ಇಟ್ಟರು ॥ 146

ಇದ್ದಷ್ಟು ದಕ್ಷಿಣೆಯನ್ನು ಕೊಟ್ಟರು । ಮತ್ತೆ ಚರಣಗಳ ವಂದಿಸಿದರು ।
ತುಂಬಿತು ಕಂಗಳಲಿ ಪ್ರೇಮಾಶ್ರು । ತನು ರೋಮಾಂಚಿತವಾಯಿತು ॥ 147

ಕಂಠ ಸದ್ಗದಿತವಾಯಿತು । ಅಷ್ಟ ಭಾವಗಳಿಂದ ಮನ ತುಂಬಿತು ।
ಮನಸಿನ ಶಂಕೆ ದೂರಾಯಿತು । ಮತ್ತೆ ಶ್ರೀ ಗುರುವಿನ ದರ್ಶನವೂ ಆಯಿತು ॥148

ನೋಡಿ ಬಾಬಾರ ಅಲೌಕಿಕ ಲೀಲೆಯ ನಿಂತು । ಮುಳೆಯಾದಿಯಾಗಿ ಎಲ್ಲರ ಗಂಟಲ ಶಿರ ಬಿಗಿಯಿತು ।
ಗೇರು ಬಟ್ಟೆಯ ಅರ್ಥ ಸ್ಪಷ್ಟವಾಯಿತು । ಅದರ ಅನುಭವವೂ ಆಯಿತು ॥ 149

ಇವರೇ ಮಹಾರಾಜರು ಇವರೇ ಮುಳೆ । ಏನಾಶ್ಚರ್ಯ ಎಲ್ಲ ಅದೇ ವೇಳೆ ।
ಯಾರು ಬಲ್ಲರು ಬಾಬಾರ ಕಳೆ । ಅಗಾಧ ಲೀಲೆ ಅವರದು ॥ 150

